**KARNATAKA NEERAVARI NIGAM LIMITED**

(A Government of Karnataka Undertaking)

**Office Of the Executive Engineer, Karnataka Neeravari Nigama Limited, No.2, Varahi Reservoir Project Division, Siddapura, Udupi Dist.**

**TO WHOM IT MAY CONCERN**

**Sub: Reservation of 71.60Acre Deemed Forest land in survey number 147/1 of Brahmavara Taluk, Hosuru Village, in lieu of forest land required for Varhi lift Irrigation Project work for CA Purpose to Forest Department.**

**Ref:** Proceeding of District Commissioner, Udupi District vide letter No:ADS.L.N.D/PDR/CR16/2021/E-63449 dated:26.05.2021

*-*-*-*-*

The above Reference letter is to certify that, as per government order dated 27/04/2021, District Commissioner Udupi District has given approval to reserve the land of 71.60acre land in survey no:147/1 of Brahmavara Taluk , Hosuru village in the name of forest department for CA Purpose in lieu of forest land required for Varahi Lift Irrigation Project work, as per Karnataka land Revenue act 1964 Column-71.

Praveen

EXECUTIVE ENGINEER
Karnataka Neeravari Nigam (L)
No. 2, V. R. P. DIVISION
SIDDAPURA

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ"
ಮಣಿಪಾಲ, ಉಡುಪಿ – 576104
Email: udupidc@gmail.com

( ಕಂದಾಯ ಇಲಾಖೆ )

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

ಸಂ: ಎಡಿಸ್ ಎಲ್.ಎನ್.ಡಿ/ಪಿಡಿಆರ್./ಸಿಆರ್.26/2021/E-63449 ದಿನಾಂಕ:26/05/2021

## ಜಿಲ್ಲಾಧಿಕಾರಿಯವರು ಉಡುಪಿ ಜಿಲ್ಲೆ, ಇವರ ನಡವಳಿ

ವಿಷಯ: ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ಬ್ರಹ್ಮಾವರ ತಾಲೂಕು ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ 71.60 ಎಕ್ರೆ ಡೀಮ್ಡ್ ಅರಣ್ಯ ಜಮೀನನ್ನು ಪರ್ಯಾಯ ಅರಣ್ಯೀಕರಣದ ಉದ್ದೇಶಕ್ಕಾಗಿ ಅರಣ್ಯ ಇಲಾಖೆ ಹೆಸರಲ್ಲಿ ಕಾಯ್ದಿರಿಸುವ ಕುರಿತು.

ಉಲ್ಲೇಖ:1. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ ನಂ.2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ:ಕಾಇಂ: ಕನೀನಿನಿ: ವಾಜಯೋವಿ/ 2ಪಿಬಿ/ವಾರಾಹಿ ಏತ ನೀರಾವರಿ ಕಾಮಗಾರಿ/ಅರಣ್ಯ/2020-21/ 1629 ದಿನಾಂಕ: 29/01/2021

2. ತಹಶೀಲ್ದಾರರು ಬ್ರಹ್ಮಾವರ ತಾಲೂಕು ಇವರ ತನಿಖಾ ವರದಿ ಸಂಖ್ಯೆ: ಎಲ್ಎನ್ ಡಿ/ ಪಿಡಿಆರ್ /ಸಿಆರ್/ 78/2020-21 ದಿನಾಂಕ: 10/02/2021
3. ಸಹಾಯಕ ಕಮೀಷನರು, ಕುಂದಾಪುರ ಇವರ ಪ್ರಸ್ತಾವನೆ ಸಂಖ್ಯೆ: ಎಲ್ಎನ್ ಡಿ/ಸಿಆರ್/ 250/ 2020-21 ದಿನಾಂಕ: 19/02/2021
4. ಸರಕಾರಕ್ಕೆ ಸಲ್ಲಿಸಿದ ಈ ಕಛೇರಿಯ ಸಮ ಸಂಖ್ಯೆಯ ಪ್ರಸ್ತಾವನೆ ದಿನಾಂಕ: 08/03/2021 ಮತ್ತು 05/04/2021
5. ಸರ್ಕಾರದ ಪತ್ರ ಸಂಖ್ಯೆ ಕಂಇ 38 ಎಲ್ ಜಿಎ 2021 ದಿನಾಂಕ: 27/04/2021

-*******-

ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ಬ್ರಹ್ಮಾವರ ತಾಲೂಕು ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ 71.60 ಎಕ್ರೆ ಡೀಮ್ಡ್ ಅರಣ್ಯ ಜಮೀನನ್ನು ಪರ್ಯಾಯ ಅರಣ್ಯೀಕರಣದ ಉದ್ದೇಶಕ್ಕಾಗಿ ಅರಣ್ಯ ಇಲಾಖೆ ಹೆಸರಲ್ಲಿ ಕಾಯ್ದಿರಿಸುವ ಕುರಿತು ಉಲ್ಲೇಖ (1) ರಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ,ನಂ -2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ ಇವರು ಅಭಿಯಾಚನಾ ಸಲ್ಲಿಸಿರುತ್ತಾರೆ.

ಸದರಿ ಅಭಿಯಾಚನಾ ಪತ್ರ ಪರಿಶೀಲಿಸಿ ತಹಶೀಲ್ದಾರರು ಬ್ರಹ್ಮಾವರ ಇವರು ತನಿಖೆ ನಡೆಸಿ ಸಹಾಯಕ ಕಮೀಷನರು ಕುಂದಾಪುರ ಇವರ ಮೂಲಕ ಸಲ್ಲಿಸಿರುವ ವರದಿಯಲ್ಲಿ ವಾರಾಹಿ ಏತ ನೀರಾವರಿ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಪ್ರದೇಶಕ್ಕೆ ಬದಲಾಗಿ ಬ್ರಹ್ಮಾವರ ತಾಲೂಕು ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ, ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ ಒಟ್ಟು 71.60 ಎಕ್ರೆ (ನಕ್ಷೆಯಲ್ಲಿ ಎ - 13.30 ಎಕ್ರೆ, ಬಿ - 10.10 ಎಕ್ರೆ, ಸಿ - 19.30 ಎಕ್ರೆ, ಡಿ - 25.20 ಎಕ್ರೆ ಹಾಗೂ ಎಮ್ - 3.70 ಎಕ್ರೆ ಎಂದು ಕಾಣಿಸಲಾಗಿರುತ್ತದೆ) ಜಮೀನಿಗೆ ಪ್ರಸ್ತಾವನೆ ತಯಾರಿಸಿ ಸಲ್ಲಿಸಿರುವುದಾಗಿದೆ. ಪ್ರಸ್ತಾವಿತ ಜಮೀನು ಅನಾಧೀನ ಜಮೀನಾಗಿದ್ದು, ಪೋರಂಬೋಕು, ಕುಮ್ಕಿ, ಗೋಮಾಳ, ಡಿಸಿ ಮನ್ನಾ ಜಮೀನಾಗಿರುವುದಿಲ್ಲ. ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ನಮೂನೆ 50, 53, 57 ರಲ್ಲಿ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿರುವುದಿಲ್ಲ, ಸದ್ರಿ ಜಮೀನಿನಲ್ಲಿ ಅಕೇಶಿಯಾ ಮತ್ತು ಕಾಟು ಗಿಡಗಳಿದ್ದು, ಹಾಡಿಯಂತೆ ಕಂಡು ಬರುತ್ತದೆ. ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಬರುತ್ತದೆ. ಸಾರ್ವಜನಿಕ ನೋಟೀಸು ಪ್ರಚುರ ಪಡಿಸಲಾಗಿದ್ದು, ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. ಎಂದು ನೀಡಿರುವ ವರದಿಯ ಮೇರೆಗೆ ಸಹಾಯಕ ಕಮೀಷನರು ಕುಂದಾಪುರ ಇವರು ಸದರಿ ಜಮೀನನ್ನು ವಾರಾಹಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ಅಗತ್ಯವಿರುವ ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ ಕಾಯ್ದಿರಿಸಬಹುದು ಎಂದು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದ್ದರಿಂದ ಕೋರಿಕೆ ಸಂಸ್ಥೆಯವರ ಕೋರಿಕೆ, ತಹಶೀಲ್ದಾರರು ಹಾಗೂ ಸಹಾಯಕ ಕಮೀಷನರ್ ಕುಂದಾಪುರ ಇವರ ಶಿಫಾರಸ್ಸು ವರದಿಗಳನ್ನು ಪರಿಶೀಲಿಸಿ ಉಲ್ಲೇಖ (4) ರಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಉಲ್ಲೇಖ (5) ರ ಸರ್ಕಾರದ ಪತ್ರದಂತೆ ವಾರಾಹಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ಅಗತ್ಯವಿರುವ 11.785 ಹೆಕ್ಟೇರ್ (29.46 ಎಕರೆ) ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ "ಡೀಮ್ಡ್ ಫಾರೆಸ್ಟ್" ವ್ಯಾಪ್ತಿಗೊಳಪಟ್ಟಿರುವ ಬ್ರಹ್ಮಾವರ ತಾಲೂಕು ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ 71.60 ಎಕರೆ ಜಮೀನನ್ನು ಅರಣ್ಯೀಕರಣ ಉದ್ದೇಶಕ್ಕೆ ಅರಣ್ಯ ಇಲಾಖೆಯ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರನ್ವಯ ಕಾಯ್ದಿರಿಸಲು ಸರ್ಕಾರದಿಂದ ಅನುಮತಿ ನೀಡಿ ಆದೇಶವಾಗಿರುತ್ತದೆ.

ಆದ್ದರಿಂದ ಸರ್ಕಾರದ ಉಲ್ಲೇಖ (5) ರ ಅನುಮತಿಯಂತೆ ವಾರಾಹಿ ಏತ ನೀರಾವರಿ ಯೋಜನೆಯ ಕಾಮಗಾರಿಗೆ ಅಗತ್ಯವಿರುವ 11.785 ಹೆಕ್ಟೇರ್ (29.46 ಎಕರೆ) ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ ಬ್ರಹ್ಮಾವರ ತಾಲೂಕು ಹೊಸೂರು ಗ್ರಾಮದ ಸ.ನಂಬ್ರ 147/1 ರಲ್ಲಿ 71.60 ಎಕರೆ ಜಮೀನನ್ನು ಪರ್ಯಾಯ ಅರಣ್ಯೀಕರಣ ಉದ್ದೇಶಕ್ಕೆ ಅರಣ್ಯ ಇಲಾಖೆಯ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರನ್ವಯ ಈ ಕೆಳಗೆ ತಿಳಿಸಿರುವ ಷರತ್ತುಗಳನ್ನು ವಿಧಿಸಿ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದೆ.

ಷರತ್ತುಗಳು:

1 ಕಾಯ್ದಿರಿಸಲಾದ ಜಮೀನನ್ನು ಕಾಯ್ದಿರಿಸಲಾದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.

2 ಕಾಯ್ದಿರಿಸಲಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣಕ್ಕೆ ಅವಕಾಶ ನೀಡಕೂಡದು.

3 ಕಾಯ್ದಿರಿಸಲಾದ ಜಮೀನುಗಳನ್ನು ಅನಧಿಕೃತವಾಗಿ ಯಾರಾದರೂ ಅತಿಕ್ರಮಿಸಿಕೊಂಡಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಯವರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು

4 ಕಾಯ್ದಿರಿಸಲಾದ ಜಮೀನನ್ನು ಯಾವುದೇ ಕಾರಣಕ್ಕೂ ಬೇರೆ ಉದ್ದೇಶಕ್ಕೆ ಪರಭಾರೆ ಮಾಡಕೂಡದು.

ಮೇಲೆ ವಿವರಿಸಿದ ಷರತ್ತುಗಳಲ್ಲಿ ಯಾವುದೇ ಒಂದು ಷರತ್ತು ಉಲ್ಲಂಘನೆಯಾದರೂ ಈ ಆದೇಶವನ್ನು ರದ್ದುಪಡಿಸಿ ಅದರಲ್ಲಿರುವ ಕೃತ ವಸ್ತುಗಳ ಸಮೇತವಾಗಿ ಜಮೀನನ್ನು ಸರ್ಕಾರದ ಸ್ವಾಧೀನ ಪಡಿಸಿಕೊಳ್ಳಲಾಗುವುದು.

ಜಿಲ್ಲಾಧಿಕಾರಿಗಳ ಕಛೇರಿ

ಜಿಲ್ಲಾಧಿಕಾರಿ,
ಉಡುಪಿ ಜಿಲ್ಲೆ, ಉಡುಪಿ

ರಿಗೆ.

1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ

2 ಸಹಾಯಕ ಕಮೀಷನರು ಕುಂದಾಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ

3 ತಹಶೀಲ್ದಾರರು ಬ್ರಹ್ಮಾವರ ತಾಲೂಕು ಇವರಿಗೆ ಮೂಲ ಕಡತದೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುತ್ತಾ, ಈ ಆದೇಶದಂತೆ ಪಹಣಿಯ ಕಾಲಂ 11 ರಲ್ಲಿ ಕಾಯ್ದಿರಿಸಲಾದ ವಿವರ ದಾಖಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

4 ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ.ನಂ -2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ - ಇವರಿಗೆ.

5. ವಲಯ ಅರಣ್ಯ ಅಧಿಕಾರಿ, ಶಂಕರನಾರಾಯಣ ವಲಯ - ಇವರಿಗೆ

6. ಕಂದಾಯ ನಿರೀಕ್ಷಕರು ಬ್ರಹ್ಮಾವರ ಹೋಬಳಿ ಇವರಿಗೆ ರವಾನಿಸುತ್ತಾ ತಾಲೂಕು ಮತ್ತು ಗ್ರಾಮ ವಹಿಗಳಲ್ಲಿ ಸೂಚಿಸಿದ ದಾಖಲಾತಿ ಮಾಡಿಸಿ ಶರ್ತ ಪೂರೈಸದಿದ್ದಲ್ಲಿ ಮಂಜೂರಾತಿ ಆದೇಶ ರದ್ದುಪಡಿಸಲು ವರದಿ ಸಲ್ಲಿಸತಕ್ಕದ್ದು.

7. ಗ್ರಾಮ ಲೆಕ್ಕಿಗರು, ಹೊಸೂರು ಗ್ರಾಮ ಇವರಿಗೆ – ಗ್ರಾಮ ವಹಿಯಲ್ಲಿ ಸೂಚಿಸಿದ ದಾಖಲಾತಿ ಮಾಡುವುದು ಮತ್ತು ಶರ್ತ ಪೂರೈಸದಿದ್ದಲ್ಲಿ ಮಂಜೂರಾತಿ ಆದೇಶ ರದ್ದುಪಡಿಸಲು ವರದಿ ಸಲ್ಲಿಸತಕ್ಕದ್ದು.